SRI K. T. RATHOD : I move :

"That the Karnataka Government Parks (Preservation) (Amendment) Bill, 1976, as passed by the Legislative Council, be passed.",

MR. DEPUTY SPEAKER : The question is :

"That the Karnataka Government Parks (Preservation) (Amendment) Bill, 1976, as passed by the Legislative Council, be passed."

The motion was adopted and the Bill was passed

THE KARNATAKA VILLAGE PANCHAYATS (POSTPONEMENT OF ELECTIONS) (AMENDMENT) BILL, 1976 as Passed by LC

Motion to consider

SRI N. RACHAIAH (Minister for Rural Development and Social Welfare) : I move:

"That the Karnataka Village Panchayats (Postponement of Elections) (Amendment) Bill, 1976, as passed by the Legislative Council, be taken into consideration."

MR. DEPUTY SPEAKER : Motion moved :

"That the Karnataka Village Panchayats (Postponment of Elections) (Amendment) Bill, 1976, as passed by the Legislative Council, be taken into consideration"

† ಶ್ರೀ ಎನ್. ರಾಚಯ್ಯ.— ಮಾನ್ಯ ಅಧ್ಯಕ್ಷರೇ, ಈ ಒಂದು ಸಣ್ಣ ತಿದ್ದುಪಡಿ ಮಾನೂದೆಯನ್ನು ಮಾನ್ಯ ಸಭೆಯ ಮುಂದೆ ಇಡುತ್ತಿದ್ದೇನೆ. ಇದರ ಒಂದು ಉದ್ದೇಶವಾದರೂ ಕೂಡ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲ ಪಂಚಾಯತಿಗಳ ಚುನಾವಣೆಯನ್ನು ಡಿಸೆಂಬರ್—1976ರವರೆಗೆ ಮುಂದಕ್ಕೆ ಹಾಕಿರುವುದು ; ಈ ಪೊದಲು ಎಲ್ಲ ಪಂಚಾಯಿತಿಗಳ ಚುನಾವಣೆಯನ್ನು 1975ನೇ ಡಿಸೆಂಬರ್ ಅಂತ್ಯದೊಳಗೆ ಮಾಡುತ್ತೇವೆಂದು ಹೇಳಿ ನಾವು ಒಂದು ಕಾನೂನನ್ನು ಮಾಡಿದ್ದು ನಿಜ ; ಮತ್ತು ಅಷ್ಟರೊಳಗೆ ಚುನಾವಣೆಯನ್ನು ಮಾಡತಕ್ಕಂಥ ಒಂದು ಭರವಸೆಯನ್ನು ನಾನು ತಮಗೆ ಕೊಟ್ಟಿದ್ದೂ ಸಹ ನಿಜ ; ಈ ಬಗ್ಗೆ ಮಾನ್ಯ ಸದಸ್ಯರಾದಂತ ಶ್ರೀ ಮಾನ್ ಕೃಷ್ಣಪ್ಪ ನವರು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಗಾಗಲೇ ಪ್ರಸ್ತಾಪ ಮಾಡಿದ್ದಾರೆ ; ಅದಕ್ಕೆ ನಾನು ಉತ್ತರವನ್ನೂ ಸಹ ಕೊಟ್ಟಿದ್ದೇನೆ. ನಮ್ಮ ಒಂದು ಭರವಸೆಯ ಪ್ರಕಾರ ಚುನಾವಣೆ ಮಾಡಬೇಕು, ನಮ್ಮ ಒಂದು ಉದ್ದೇಶವನ್ನು ಈಡೇರಿಸಬೇಕೆಂಬ ಆತುರ ಇದ್ದರೂ ಸಹ, ಈಗ ರಾಷ್ಟ್ರೀಯ ತುರ್ತುಪರಿಸ್ಥಿತಿಯ ಕಾನೂನು ಘೋಷಣೆಯಾಗಿರುವ ಕಾರಣದಿಂದ ಈ ಚುನಾವಣೆಗಳನ್ನು ಸಹ ಮುಂದೂಡಬೇಕಾದ ಸ್ಥಿತಿ ಬಂದಿದೆ, ಈಗಾಗಲೇ ಪಾರ್ಲಿಮೆಂಟ್ ಚುನಾವಣೆಯನ್ನು ಸಹ ಮುಂದೂಡರಾಗಿದೆ. ಅದರಂತೆ ಈ ಪಂಚಾಯಿತಿಗಳ ಚುನಾವಣೆಯನ್ನು ಈಗ ಮಾಡತಕ್ಕಂಥ ಅಗತ್ಯವಿಲ್ಲ ಎಂಬ ಬಗ್ಗೆ ಸರ್ಕಾರ ಒಂದು ತೀರ್ಮಾನ ತಗದುಕೊಂಡಿದೆ ; ಈ ತುರ್ತುಪರಿಸ್ಥಿತಿ ಘೋಷಣೆಯಾದ ಮೇಲೆ ಜನತೆಗೆ ಪ್ರಗತಿದಾಯಕವಾದಂಥ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಕೈಗೊಂಡಿದೆ. ಈ ತುರ್ತುಪರಿಸ್ಥಿತಿ ರದ್ದಾದ ಕೂಡಲೆ ಈ ಚುನಾವಣೆಗಳನ್ನು ಆದಷ್ಟು ಬೇಗ ತಮ್ಮ ಒಂದು ಅಪೇಕ್ಷೆ ಪ್ರಕಾರ ಮತ್ತು

ನಮ್ಮ ಒಂದು ಭರವಸೆಯ ಪ್ರಕಾರ ಮಾಡಲಾಗುತ್ತದೆ. ಈಗ ಈ ಒಂದು ಪುಟ್ಟ ತಿದ್ದುಪಡಿ ಮಸೂದೆಯೆನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇದರಲ್ಲಿರತಕ್ಕಂಥ ತಿದ್ದುಪಡಿಯಾದರೂ ಸಹ ತಾ : 31ನೇ ಡಿಸೆಂಬರ್ 1975 ಎಂದಿರುವುದನ್ನು ತಾರೀಖು 31ನೇ ಡಿಸೆಂಬರ್ 1976 ಎಂದು ಬದಲಾವಣೆ ಮಾಡಬೇಕಾಗಿರುವುದು : ಇದನ್ನು ತಮ್ಮ ಮುಂದೆ ಇಡುತ್ತಿದ್ದೇನೆ ; ಈ ಮಸೂದೆಯನ್ನು ತಾವು ಚರ್ಚೆಯಿಲ್ಲದೆ ಅನುಮೋದನೆ ಮಾಡಬೇಕೆಂದು ತಮ್ಮ ಮುಂದೆ ಮುಂಡನೆ ಮಾಡುತ್ತಿದ್ದೇನೆ.

† SRI B. B SAYANAK (Belgaum).—I rise to oppose this Bill placed before the House by the inMister for Social Welfare. Last year the Hon'ble Minister had promised to this House that he will hold election to the village Panchayats before 31st December 1976 but so far he has not fulfilled that promise. Just today we read in the newspapers that the Prime Minister is of the opinin that there should be decentralisation of power But the state Government is afraid to face the elections. Under the guise of emergency you are saying that you are not holding the elections. Shortly there will be so many elections which have to take place to the Legislative Council and Rajya Sabha. As you know the Gujarat Government did hold elections to the Panchayats and even to the municipalities and Zilla Parishads. When that is the case, why should you withhold elections to the panchayats here? There are so many municipalities and Village panchayats which have not had elections for the last 8 to 10 years Is this democracy ?Is this decentralisation of power? You are not giving powers to the villagers to elect their representatives to the village panchayats and Municipalities and the reason you adduce is that there is emergency, You say that if election are held there will be murders. Are you not afraid of murders in the general elections? The Minister had definitely promised that he will hold elections to the village panchayats before 31 December 1975. I request him to stick to his words of promise and hold the elections immediately.

† ಶ್ರೀ ಎಸ್. ಎಂ. ಶೀರಶ್ಯಾಳ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ. ನಮ್ಮ ಮಾನ್ಯ ಸಚಿವರು ತಂದಿರತಕ್ಕ ಮಸೂದೆ ತಿದ್ದುಪಡಿಗೆ ಪೂರ್ಣ ಬೆಂಬಲ ಕೊಟ್ಟು ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನು ನಮ್ಮ 20 ಅಂಶಗಳ ಅರ್ಥಿಕ ಕಾರ್ಯಕ್ರಮ ಬಂದಿದೆ ಅದನ್ನು ಸಾಮಾನ್ಯ ಬಡಜನತೆಗೆ ಕೊಡಬೇಕು ಎನ್ನುವ ಹಂತದಲ್ಲಿ ನಮ್ಮ ಪಂಚಾಯತಿಗಳು ಪಟ್ಟಬದ್ರ ಹಿತಾಶಕ್ತಿಗಳ ಕೈಯಲ್ಲಿ ಸಿಕ್ಕಿಕೊಂಡಿವೆ. ಈಗ ತಾನೇ ಒಂದು ಆರ್ಡಿಯನ್ನು ತಮ್ಮ ಕಡೆ ಕೊಟ್ಟಿರತ್ತೇನೆ. ಯಾರಿಗೆ ಈ 20 ಅಂಶಗಳ ಅರ್ಥಿಕ ಕಾರ್ಯಕ್ರಮದ ಬಗ್ಗೆ ಕಳಕಳಿಯಿಲ್ಲವೋ ಅಂಥ ಜನಗಳ ಆಡಳಿತದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ಒಂದು ಸೈಟು ವಿತರಣೆ ಮಾಡುವುದಕ್ಕೆ ಅವರಿಗೆ ವ್ಯವಧಾನವಿಲ್ಲ. ಗೋವಾಳ ಜಮೀನು ಎಷ್ಟು ಇದ್ದರೂ ಕೂಡ ಬಡವರಿಗೆ ಸ್ವಲ್ಪ ಜಾಗವನ್ನು ಕೊಡುವ ಮನಸ್ಸಿಲ್ಲ. ಯಾರು ಜಮೀನು ಇಲ್ಲವೋ ಇಲ್ಲನೆ ಇರುವವರಿಗೆ ಮತ್ತು ಹರಿಜನ ಗಿರಿಜನರಿಗೆ ಶಿಫಾರಸು ಮಾಡಿ ಕೊಡುವತಕ್ಕಂಥ ಕಳಕಳಿ ಮನಸ್ಸು ಇಲ್ಲದಂತಹ ಜನರು ಇದ್ದಾರೆ. ಇಂತಹ ಪಂಚಾಯತಿ ಅಧ್ಯಕ್ಷರು ಅನೇಕಾನೇಕರು ಇದ್ದಾರೆ. ಯಾವ ಅಧಿಕಾರಿಗಳು ಬಿ. ಡಿ. ಓ. ಗಳು ಮನೆಗಳನ್ನು ಹಂಚುವತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದರೂ ಅದನ್ನು ವಿಚಾರಿ ಮಾಡುವುದಕ್ಕೂ ಕಷ್ಟವಾಗು

ತ್ತದೆ. ಇವೊತ್ತು ಎಲ್ಲಾ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಜಮೀನು ಇರುವುದಿಲ್ಲ. ಅಂತಹ ಕಡೆ ಖಾಸಗಿ ಜಮೀನನ್ನು ಅಕ್ವೈರ್ ಮಾಡುವುದಕ್ಕಾಗಿ ಪಂಚಾಯಿತಿ ಅಧ್ಯಕ್ಷರು ಸಹಕಾರ ಕೊಡದೆ ಹೋದರೆ ಯಾವರೀತಿಯಾದ ಕಳಕಳಿ ಇಲ್ಲದೆ ಹೋದರೆ ಹೇಗೆ ನಮ್ಮ ಆರ್ಥಿಕ ಕಾರ್ಯಕ್ರಮದ ಫಲ ಜನರಿಗೆ ಸಿಕ್ಕುತ್ತದೆ ? ಈಗ ತಾನೇ ಕೊಟ್ಟಿರುವ ಅರ್ಜಿಯಲ್ಲಿ ಹೇಳಿದ್ದಾರೆ ಆ ಪಂಚಾಯಿತಿಯಲ್ಲಿ ಒಂದು ಸಭೆಯನ್ನು ಕರೆಯುವುದಿಲ್ಲ, ಪಂಚಾಯಿತಿ ತರಾವುಗಳನ್ನು ರುಜು ಮಾಡಿಸಿಕೊಳ್ಳಬೇಕಾದರೆ ಮೆಂಬರುಗಳ ಮನೆ ಮನೆಗೆ ಹೋಗಿ ರುಜು ತೆಗೆದುಕೊಂಡು ಬರುತ್ತಾರೆಂದರೆ ಇಷ್ಟರಮಟ್ಟಿನ ಮಟ್ಟದಲ್ಲಿ ಪಂಚಾಯಿತಿಗಳು ಕೆಲಸಮಾಡುತ್ತಿವೆ. ಇನ್ನು ಪಂಚಾಯಿತಿ ಆಫೀಸುಗಳನ್ನು ಗೋಡೋನ್ ಮಾಡಿಕೊಂಡಿದ್ದಾರೆ. ಇಂಥ ಪಂಚಾಯಿತಿಗಳಿಂದ ಬಡ ಜನರ ಶೋಷಣೆ ಮಾಡುವುದಕ್ಕೆ ಹೊರಟಿದ್ದಾರೆ ಆದ್ದರಿಂದ ಪಂಚಾಯಿತಿ ಎಲೆಕ್ಷನ್ ಮುಂದು ವರಿಸುತ್ತೇವೆಂದು ಅವರಿಗೆ ಗೊತ್ತಾಗಿರುವುದರಿಂದ ಅವರಿಗೆ ಇದು ವರಪ್ರಥಾನವಾಗಿ ಪರಿಣಮಿಸಿದೆ. ಆದ್ದರಿಂದ ಇಂಥ ಪಂಚಾಯಿತಿಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು. ಇದರ ಬಗ್ಗೆ ಅವರು ಸುಕ್ಕಿಯ ಪಾತ್ರ ವಹಿಸದಿದ್ದರೆ ಟಿ ಡಿ ಬಿ ಯಿಂದ ಕೆಲಸ ಕಾರ್ಯಗಳನ್ನು ಮಾಡಿಸುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಇಂತಹ ಪಂಚಾಯಿತಿಗಳ ಮೇಲೆ ಹತೋಟಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಒಂದು ಪಂಚಾಯಿತಿಯ ಬಗ್ಗೆ ಹೇಳುವುದಾದರೆ ಮಲ್ಲಾಪುರ ಪಂಚಾಯಿತಿಯ ಸುಧರ್ದಿನಲ್ಲಿ ಒಂದು ಗ್ರಾಮ ಟೌನ್ ಇದೆ ಅದರಲ್ಲಿ ಹುಣಸೆ ಮರಗಳು ಇವೆ. ಅದರ ಹಣ್ಣನ್ನು ಹರಾಜು ಮಾಡುವುದರ ಮೂಲಕ ಪಂಚಾಯಿತಿಗೆ ಹಣ ವಸೂಲು ಮಾಡುವುದಿಲ್ಲ. ಅಥವಾ ಬಡಜನರಿಗೆ ಮತ್ತು ಊರಿನವರಿಗೆ ಹಂಚುವುದಿಲ್ಲ. ಅದನ್ನು ತಮ್ಮ ಸ್ವಂತ ಆಸ್ತಿ ಎಂಬಂತೆ ತಮ್ಮ ಮನೆಗಳಿಗೆ ಮತ್ತು ತಮ್ಮ ಬಂಧುಬಳಗದವರಿಗೆ ಕೊಡುವ ಮೂಲಕ ಹಂಚಿಕೊಳ್ಳುತ್ತಿದ್ದಾರೆ. ಇಂತಹ ರಾಕ್ಷಸೀ ಕೃತ್ಯ ಮಾಡುವಂತಹ ಪಂಚಾಯಿತಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ಇಂಥ ಎಲ್ಲಾ ಶೋಷಣೆ ಮಾಡಿಕೊಂಡು ಅನುಜಾನವಾಗಿ ನಡೆಸಿಕೊಂಡು ಹೋಗುವವರಿಗೆ ಅನುಕೂಲವಾಗಿವೆ ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ಪೈಮಗಲ್).—ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿ ಮಂತ್ರಿಗಳು ಪಂಚಾಯಿತಿಗಳ ಚುನಾವಣೆಗಳನ್ನು ಮುಂದೂಡುವ ಶಾಸನವನ್ನು ನಮ್ಮ ಮುಂದೆ ಇಟ್ಟಿದ್ದಾರೆ, ಅವರು ಅದರ ಬಗ್ಗೆ ಪ್ರಸ್ತಾಪ ಮಾಡುತ್ತಾ ತುರ್ತುಪರಿಸ್ಥಿತಿ ಇದೆ ಆದುದರಿಂದ ಚುನಾವಣೆ ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ನನಗೆ ಅರ್ಥವಾಗುವಂತಾದ್ದು ಏನು ಎಂದರೆ ಇದು ತುರ್ತುಪರಿಸ್ಥಿತಿ ಕಾರಣವಲ್ಲ. ನಿಜವಾಗಿಯೂ ಅದೇ ಕಾರಣವಾಗಿದ್ದರೆ ಇವತ್ತಿನದಿವಸ ನಮ್ಮ ನೆರೆ ರಾಜ್ಯವಾದ ಗುಜರಾತಿನಲ್ಲಿ ಚುನಾವಣೆಗಳನ್ನು ನಡೆಸಿದ್ದಾರೆ, ಅದರಲ್ಲೂ ತುರ್ತುಪರಿಸ್ಥಿತಿಬರಲು ಯಾರು ಯಾರು ಕಾರಣರೋ ಅವರಿಗೆ ವಿರೋಧವಾಗಿರತಕ್ಕಂಥ ಪಕ್ಷ ಅದರಲ್ಲೂ ಪ್ರಜಾಪ್ರಭುತ್ವದಲ್ಲಿ ಯಾರಿಗೆ ನಂಬಿಕೆಯಿಲ್ಲ ಎಂದು ನೀವು ಹೇಳುತ್ತಿರೋ ಅವರು ಹಾಗೆ ಮಾಡಿದರೂ, ಹೀಗೆ ಮಾಡಿದರೂ ಎಂದು ಹೇಳಿದರೋ ಅಂಥ ಗುಜರಾತ್‌ನಲ್ಲಿ ಪಂಚಾಯಿತಿ ಚುನಾವಣೆಗಳು ನಡೆದಿವೆ. ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದಿದ್ದರೆ ಅವರು ಚುನಾವಣೆಯನ್ನು ಮುಂದುವರಿಸುತ್ತಿದ್ದರು. ಅದನ್ನು ಒಂದು ಕಾರಣವಾಗಿ ತಾವು ಮುಂದುವರಿಸುವುದು ಸರಿಯಲ್ಲ. ನಿಜವಾದ ಕಾರಣವನ್ನು ಹೇಳಿ ಮುಂದುವರಿಸಿದ್ದರೆ ನಾನು ಸಂತೋಷಪಡುತ್ತೇನೆ.

ಅನುಕೂಲಸಿಂಧುವಾದ ಕಾರ್ಯಕ್ರಮವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಎಮರ್ಜೆನ್ಸಿ ಹೋಗಲಿ, ನೋಡೋಣವೆಂದರೇನು ? ಈಗ ಅದಕ್ಕೆ ಒಂದು ನಂಬಂಧವಿದೆಯೆಂದು ಹೇಳಿದರೆ ಹೆಗೆ ? ಎಮರ್ಜೆನ್ಸಿ ಬಂದಿದೆಯೆಂದು ಸರ್ಕಾರದವರು ಏನೇನು ಮಾಡಬೇಕೆಂದು ಹೇಳುತ್ತಾರೋ ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. ಆದರೆ ಅದೇ ರೀತಿಯಲ್ಲಿ ಶಿಸ್ತಾಗಿ ಮಾಡಬೇಕಾದ ಕೆಲಸವೇ ಆಗಲಿ ಕಾನೂನುಬದ್ಧವಾಗಿ ನಡೆಯಬೇಕೆಂದು ಹೇಳುತ್ತಿರುವಾಗ ಈ ಕೆಲಸವೂ ಸಹ ಕಾನೂನುಬದ್ಧವಾಗಿಯೇ ಮಾಡಬೇಕಾಗಿತ್ತು. ಕಾನೂನುಗಳನ್ನು ಬದಲಾವಣೆ ಮಾಡುವುದಕ್ಕೆ ನಮಗೆ ಹಕ್ಕು ಇದೆ ರಾಜ್ಯಾಂಗವನ್ನೇ ಬದಲಾವಣೆ ಮಾಡುವುದಕ್ಕೆ

ಹಕ್ಕು ಇದೆ ಎಂಬುದಾಗಿಯೂ ಹೇಳುತ್ತೀರಿ. ಅದನ್ನು ನಾನು ಇಲ್ಲಿ ಪ್ರಶ್ನೆಮಾಡುವುದಿಲ್ಲ. ಜನತೆ ಯಾವಾಗಲೂ ಇಂತಿಷ್ಟು ವರ್ಷಗಳು ಎಂಬುದಾಗಿ ಒಬ್ಬರಿಗೆ ಅಧಿಕಾರ ಕೊಡುತ್ತಾರೆ. ಪಂಚಾಯತಿಗಳಿಗೆ 4 ವರ್ಷಗಳ ಅಧಿಕಾರ ಕೊಟ್ಟು ಕಳುಹಿಸಿದ್ದಾರೆ. ಈ 4 ವರ್ಷಗಳ ಒಂದು ಅವಧಿಯಲ್ಲಿ ಈ 4 ವರ್ಷಗಳು ಅವಧಿಯಾಗಿ ಇನ್ನೂ ಎರಡು ಮೂರು ವರ್ಷಗಳು ಮೇಲೇ ಆಯಿತು, ಆಂದನೇಲೆ ಅವರಿಗೆ ಈಗ ಅಧಿಕಾರದಲ್ಲಿರುವುದಕ್ಕೆ ಯಾವ ಹಕ್ಕು ಇದೆ ? ಅವರು ಜನತೆಯ ಅಭಿಮತ ಪಡೆದಿರುವುದು ಕೇವಲ 4 ವರ್ಷಗಳಿಗೆ ಮಾತ್ರ.

ಶ್ರೀ ಎನ್. ರಾಚಯ್ಯ.—ಹಾಗಾದರೆ ಅದನ್ನು ರದ್ದುಮಾಡಬೇಕೆಂದು ಹೇಳುತ್ತೀರಾ ?

ಶ್ರೀ ಸಿ. ಬೈರೇಗೌಡ.—ಇವತ್ತು ಪಂಚಾಯತಿಗಳ ಚುನಾವಣೆಯನ್ನು ಮುಂದೂಡುವುದಕ್ಕೆ ಹೊರಟಿದ್ದೀರಿ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಅವಧಿಯೂ ಕೂಡ ಸಹ ಮುಗಿಯಿತು. ಮೊದಲು ಅದನ್ನು ರದ್ದುಮಾಡಿ ಈಗ ಪುನಃ ಅದನ್ನು ರಚನೆಮಾಡಿ ಕೊಂಡಿದ್ದಾರೆ. ಅದನ್ನು ಮಾಡಬೇಡಿ ಎಂಬುದಾಗಿ ನಾವೆಲ್ಲರೂ ಹೇಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನಗಳ ಅಭಿಪ್ರಾಯ ಅವರ ಪ್ರತಿನಿಧಿಗಳ ಮೂಲಕ ಹೋಗುತ್ತದೆ. ಅದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟು ಚುನಾವಣೆಗಳನ್ನು ಇವತ್ತಿನ ದಿನದ ತಕ್ಷಣ ಮಾಡಿ. ನನ್ನ ಹಿಂದೆ ಮಾತನಾಡಿದಂಥ ಮಾನ್ಯ ಮಿತ್ರರು ಅನೇಕ ಕಡೆಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಕೈಲಿ ಇದು ಇದೆಯೆಂದು ಹೇಳಿದರು. ವೆಸ್ಟೆಡ್ ಇಂಟರೆಸ್ಟ್ ಇದರಲ್ಲಿ ಬಹಳವಾಗಿದೆಯೆಂದು ಹೇಳಿದರು, ಅದು ನಿಜ, ಅದನ್ನು ನಾನೂಕೂಡ ಒಪ್ಪುತ್ತೇನೆ. ಅಂತಹ ಪಟ್ಟಭದ್ರ ಹಿತಾಸಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ರೀತ್ಯ ತಮಗೆ ಅವಕಾಶವಿದೆ. ಅದನ್ನು ತಾವು ಇದುವರೆಗೂ ಅದರ ಮೇಲೆ ಒಂದೂ ಕೂಡ ಉಪಯೋಗಿಸುತ್ತಾ ಇಲ್ಲ. ನಮ್ಮ ಕ್ಷೇತ್ರದಲ್ಲಿನ ಒಂದು ಪಂಚಾಯಿತಿ ವಿಷಯವನ್ನು ಇಲ್ಲಿ ಹೇಳಬೇಕಾದರೆ ಅಲ್ಲಿ ಅನೇಕ ಅನಾಹುತಗಳಿವೆ. ಸುಮಾರು 2 ವರ್ಷಗಳಿಂದಲೂ ಅಲ್ಲಿ ಬೀದಿ ದೀಪ ಹಾಕುತ್ತೇವೆಂದು ಹೇಳುತ್ತಲೇ ಇದ್ದಾರೆ. ಕೇವಲ ಟ್ಯೂಬ್ ಲೈಟ್‌ಗೋಸ್ಕರ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೆ ಇವತ್ತಿನ ದಿನ ಅಲ್ಲಿ ಟ್ಯೂಬ್ ಲೈಟ್‌ಗಳೇ ಇಲ್ಲ. ಹಣ ಮಾತ್ರ ಖರ್ಚಾಗಿದೆ. ಅಂತಹವರೂ ಸಹ ಅಲ್ಲಿ ಇದ್ದಾರೆ, ಪಂಚಾಯತಿಗಳಲ್ಲಿ ಅಂತಹವರ ಬಗ್ಗೆ ಇದುವರೆಗೂ ಯಾವ ಕ್ರಮವನ್ನು ಸರಕಾರ ತೆಗೆದುಕೊಂಡಿಲ್ಲ. ಪಂಚಾಯತಿಗಳಲ್ಲಿ ಯೋಗ್ಯರಾದವರು ಆರಿಸಿ ಬರುವುದಕ್ಕೆ ಒಂದು ಅವಕಾಶವಿದ್ದರೂ ಅದಕ್ಕೆ ಬದಲಾಗಿ ಪಂಚಾಯತಿಗಳಿಗೆ ಬೀದವರಾನ ಮಾಡುವುದಕ್ಕೆ ಹೊರಟಿದ್ದೀರಿ' ವೆಸ್ಟೆಡ್ ಇಂಟರೆಸ್ಟ್ ಇರ ತಕ್ಕವರಿಗೆ ಅವಕಾಶ ಕೊಡಬೇಕೆಂದರೆ ಹೇಗೆ ? ಆದ್ದರಿಂದ ಈಗ ಚುನಾವಣೆ ನಡೆದರೆ ಯಾರು ಯೋಗ್ಯರು ಇರುತ್ತಾರೋ ಅಂತಹವರು ಮಾತ್ರ ಎಲೆಕ್ಷಾಗಿ ಬರುತ್ತಾರೆ, ವೆಸ್ಟೆಡ್ ಇಂಟರೆಸ್ಟ್ ಇರುವವರೇ ಅಲ್ಲಿ ಎಲೆಕ್ಷಾಗಿ ಬರುವುದಕ್ಕೆ ಹೆಚ್ಚು ಪ್ರಯತ್ನಪಡುತ್ತಾರೆ. ಇಂತಹ ವೆಸ್ಟೆಡ್ ಇಂಟರೆಸ್ಟ್ ಇರುವವರು ಅಲ್ಲಿ ಒಂದು ರೀತಿಯಲ್ಲಿ ರಾಜಕೀಯ ಮಾಡಿದಂತಾಗುವುದಿಲ್ಲವೇ ? ಇದಕ್ಕೆ ತಮ್ಮಲ್ಲಿ ಏನು ಉತ್ತರವಿದೆಯೋ ಅದನ್ನು ತಿಳಿಸಬೇಕು. ಆದ್ದರಿಂದ ಈ ಕಾರಣದಿಂದ ಎಮರ್ಜೆನ್ಸಿಗೂ ಮತ್ತು ಈ ಚುನಾವಣೆಗೂ ಏನೂ ಯಾವ ಸಂಬಂಧವೂ ಇಲ್ಲ. ಈಗಾಗಲೇ ಒಂದು ರಾಜ್ಯದಲ್ಲಿ ಪಂಚಾಯತಿಗಳ ಚುನಾವಣೆಯನ್ನು ನಡೆಸಿದ್ದೀರಿ. ಅಂದಮೇಲೆ ಕರ್ನಾಟಕದಲ್ಲಿ ಪಂಚಾಯತಿಗಳ ಚುನಾವಣೆಯಲ್ಲಿ ಯೋಗ್ಯರಾಗಿರತಕ್ಕವರು ಆರಿಸಿ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ದೃಷ್ಟಿಯಿಂದ ತಕ್ಷಣ ಇಲ್ಲಿಯೂ ಚುನಾವಣೆಗಳನ್ನು ಮಾಡುವುದು ಅವಶ್ಯಕವಿದೆ. ಏಕೆಂದರೆ ಈ ಎಮರ್ಜೆನ್ಸಿ ಇನ್ನೂ ಎಷ್ಟು ದಿವಸಗಳವರೆಗೆ ಇರುತ್ತದೋ ನನಗೆ ಗೊತ್ತಿಲ್ಲ. 26ನೇ ದಿನಂಬರ್‌ವರೆಗೆ ಎಂದು ಬೇರೆ ಹೇಳುತ್ತೀರಿ. ಅಂದ ಮೇಲೆ ಆಗಲೂ ಈ ಚುನಾವಣೆಯನ್ನು ಮುಂದೂಡುತ್ತಿರೋ ಏನೋ ನನಗಂತೂ ಗೊತ್ತಾಗುತ್ತಾ ಇಲ್ಲ. ಈಗ ಕೆಲವು ಪಂಚಾಯತಿಗಳ ಕಥೆ ಏನಾಗಿದೆಯೆಂದರೆ, ಅಲ್ಲಿರತಕ್ಕ ಪಟ್ಟಬದ್ರ ಹಿತಾಶಕ್ತಿಗಳಿಗೆ ವಂಶಪಾರಂಪರ್ಯವಾಗಿ ಅಲ್ಲಿ ಇರಬೇಕೆಂಬ ಮನಸ್ಸು ಏನಾದರೂ ಇದ್ದ ಪಕ್ಷದಲ್ಲಿ ಅವರ ಬಗ್ಗೆ ಒಂದು ಬಿಲ್ಲನ್ನು ಬೇಕಾದರೆ ಸ್ಪೆಶ್ಯೇಕವಾಗಿ ತೆಗೆದುಕೊಂಡು ಬನ್ನಿ. ಏಕೆಂದರೆ ಈ ಎಮರ್ಜೆನ್ಸಿ ಯಾವಾಗ ಮುಗಿಯುತ್ತದೋ ನನಗೆ ಗೊತ್ತಿಲ್ಲ, ಎಮರ್ಜೆನ್ಸಿ ನಾರ್ಮಲ್ ಆಗುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಈ ಎಮರ್ಜೆನ್ಸಿ ಹೋಗುವುದಿಲ್ಲ. ಇದೇ ಪರಿಸ್ಥಿತಿ ಏನಾದರೂ ಮುಂದುವರಿದರೆ ತಾವು ತಕ್ಷಣ ಪಂಚಾಯತಿ ಚುನಾವಣೆಗಳನ್ನು ನಡೆಸಲೇಬೇಕು.

ಕೊನೆಯದಾಗಿ ಒಂದು ಮಾತು. ನಾನು ತಮಗೆ ಬೇಕಾದರೆ ಒಂದು ಪಂಚಾಯತಿ ವಿಷಯವನ್ನು ಹೇಳುತ್ತೇನೆ. ಆದರ ಹೆಸರನ್ನು ಮಾತ್ರ ನಾನು ಇಲ್ಲಿ ಹೇಳುವುದಿಲ್ಲ. ಹೆಸರನ್ನು ಹೇಳಲ ಅಂದರೆ ಹೇಳುತ್ತೇನೆ. ಅದನ್ನು ನಾಳೆ ಸಂಜೆಯೊಳಗೆ ತನಿಖೆ ನಡೆಯಿಸಿ ನೀವು ಅದರ ಬಗ್ಗೆ ನಾಳೆ ಸಂಜೆಯೊಳಗೆ ಉತ್ತರ ಕೊಟ್ಟರೆ ಆಗ ನಿಮ್ಮನ್ನು ದಕ್ಷವಂತರೆಂದು ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನ ನರಸಾಪುರ ಪಂಚಾಯತಿ. ಆ ಪಂಚಾಯತಿಯಲ್ಲಿ ಏನೇನು ಕೃತ್ಯಗಳು ನಡೆದಿವೆಯೆಂಬುದನ್ನು ತಾವು ಚೆನ್ನಾಗಿ ಮನಗಾಣಬಹುದು. ದಯವಿಟ್ಟು ಮಾನ್ಯಮಂತ್ರಿಗಳು ಈ ಕೆಲಸಮಾಡಲಿ. ಒಟ್ಟಿನಲ್ಲಿ ನಾನು ಹೇಳಿದ ಪ್ರಕಾರ ಈ ಮೂಸೂದೆಯನ್ನು ಕೂಡಲೇ ವಾಪಸ್ಸು ತೆಗೆದುಕೊಂಡು ಆದಷ್ಟು ಬೇಗ ಪಂಚಾಯತಿ ಚುನಾವಣೆಗಳನ್ನು ನಡೆಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ ವಿ. ಕಕ್ಕಿಲಾಯ (ಬಂಟ್ವಾಳ).— ಮಾನ್ಯ ಉಪಾಧ್ಯಕ್ಷರೇ, ಈಗ ಏನೂ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೀರೋ ಅದನ್ನು ನಾನು ವಿರೋಧಿಸಿ ನನ್ನ ಅಭಿಪ್ರಾಯವನ್ನು ಕೊಡುತ್ತೇನೆ. ಏಕೆಂದರೆ ಮಾನ್ಯ ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ ಅವರು ಈಗ ಪಂಚಾಯತಿಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆಯೆಂಬುದಾಗಿ ಬಹಳ ಚೆನ್ನಾಗಿ ವಿವರಿಸಿದ್ದಾರೆ. ಅವರ ಮಾತು ಕೇಳಿದಮೇಲೆ ಇದನ್ನು ನಾನು ವಿರೋಧಿಸಲೇ ಬೇಕೆನ್ನಿಸಿತು. ನಮ್ಮ ರಾಜ್ಯದಲ್ಲಿ ಎಷ್ಟು ಬೇಗ ಬೇಗ ಪಂಚಾಯತಿಗಳಿಗೆ ಚುನಾವಣೆಗಳನ್ನು ಸರ್ಕಾರದವರು ನಡೆಸುತ್ತಾರೋ ಅಷ್ಟು ಬೇಗ ತಾವೇನು ಎಮರ್ಜೆನ್ಸಿ ಕಾಲದಲ್ಲಿ ನಿಮ್ಮ ೨೦ ಅಂಶಗಳ ಕಾರ್ಯಕ್ರಮ ಜಾರಿಗೆ ತರಬೇಕೆಂದಿದ್ದೀರೋ ಅವೆಲ್ಲವೂ ಜಾಗ್ರತೆಯಾಗಿ ಜಾರಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಯಾವ್ಯಾವ ಪುಚಾಯತಿಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಯಾರ್ಯಾರು ಇದ್ದಾರೋ ಅಂತಹವರನ್ನೆಲ್ಲಾ ದೂರು ತೊಲಗಿಸುವುದಕ್ಕೆ ಒಂದು ಸಹಕಾರಿಯಾಗುತ್ತದೆ. ಆಗ ನಿಮ್ಮ ೨೦ ಅಂಶಗಳ ಕಾರ್ಯಕ್ರಮಗಳೆಲ್ಲವೂ ಫಲಕಾರಿಯಾಕೆವಂತಹ ಉದ್ದೇಶವೇನಿದೆಯೋ ಅದು ಸಫಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಒಂದು ಉದ್ದೇಶ ಪೂರ್ತಿಯಾಗಿ ಈಡೇರಿಸಬೇಕಾದರೆ ಆದಷ್ಟು ಬೇಗನೆ ಈ ರಾಜ್ಯದಲ್ಲಿಯೂ ಪಂಚಾಯತಿ ಚುನಾವಣೆಗಳನ್ನು ನಡೆಸಬೇಕೆಂದು ನನಗನ್ನಿಸುತ್ತದೆ. ಅವಕ್ಕೆ ಮಾನ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್ ಅವರ ಭಾಷಣವೇ ಸಾಕ್ಷಿ. ಮಾನ್ಯ ಶ್ರೀ ಬೈರೇಗೌಡರು ಮಾತನಾಡುತ್ತಾ ಗುಜರಾತಿನಲ್ಲಿ ಎಮರ್ಜೆನ್ಸಿ ಇದ್ದರೂ ಕೂಡ ಅಲ್ಲಿ ಪಂಚಾಯತಿಗಳ ಚುನಾವಣೆ ನಡೆಸಿದ್ದಾರೆ, ತಮ್ಮ ಪಕ್ಷದಿಂದ ಬಹುಮಂತಗಳನ್ನೂ ಪಡೆದು ಬಂದಿದ್ದಾರೆಂಬ ಅಂಶವನ್ನು ನೆನಪು ಇಟ್ಟುಕೊಂಡು ಹೇಳಿದರು.

ಶ್ರೀ ಸಿ. ಬೈರೇಗೌಡ.— ನಾನು ಗುಜರಾತಿನಲ್ಲಿಯೂ ಚುನಾವಣೆಯಾಯಿತೆಂದು ಹೇಳಿದನೇ ಹೊರತು ಮತ್ತೇನೂ ಇಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.— ಇವತ್ತು ಜನತೆಗೆ ಅವಕಾಶ ಕೊಟ್ಟರೆ ಹಿಂದೆ ಯಾರು ಪಟ್ಟ ಭದ್ರ ಹಿತಾಸಕ್ತಿಗಳಾಗಿ ದುರ್ವ್ಯವಹಾರ ನಡೆಸುತ್ತಿದ್ದರೋ ಅಂತಹವರನ್ನು ಅಲ್ಲಿಂದ ತೊಲಗಿಸಿ ಮುಂದೆ ಈ ೨೦ ಅಂಶಗಳ ಕಾರ್ಯಕ್ರಮವೇನಿದೆಯೋ ಅದನ್ನು ಚೆನ್ನಾಗಿಮಾಡತಕ್ಕವರು ಆರಿಸಿಬರುತ್ತಾರೆಂಬ ವಿಶ್ವಾಸ ನನಗಿದೆ. ಇದರಲ್ಲಿ ಯಾರೂ ಕೂಡ ಏನೂ ಅನುಮಾನ ಪಡಬೇಕಾಗಿಲ್ಲ. ಪಂಚಾಯತಿ ಚುನಾವಣೆಗಳನ್ನು ಎಷ್ಟು ಬೇಗ ನಡೆಸಿದರೆ ಅಷ್ಟು ಒಳ್ಳೆಯದೆಂದು ನಾನು ಅಭಿಪ್ರಾಯಪಡುತ್ತೇನೆ. ಇನ್ನೊಂದು ಮಾತು. ಎಮರ್ಜೆನ್ಸಿ ಕಾಲದಲ್ಲಿ ಇನ್ನೂ ಕೆಲವಾರು ಚುನಾವಣೆಗಳನ್ನ ನಡೆಸಿದ್ದೀರಿ. ಬರೀ ಗುಜರಾತಿನಲ್ಲಿ ಅಷ್ಟೇ ಅಲ್ಲ. ಮೈಸೂರು ರಾಜ್ಯದಲ್ಲಿಯೂ ಅನೇಕ ಮಾರ್ಕೆಟ್ ಕಮಿಟಿಗಳಿಗೆ ಚುನಾವಣೆಗಳನ್ನು ನಡೆಸಿದ್ದೀರಿ. ಅಲ್ಲಿ ಒಳ್ಳೆಯ ಜನರು ಆರಿಸಿ ಬಂದಿರುವ ಆನುಭವವೂ ನಮ್ಮ ಮುಂದಿದೆ. ಆದ್ದರಿಂದ ತಮ್ಮಲ್ಲಿ ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಈ ತಿದ್ದುಪಡಿ ಮಸೂದೆಯನ್ನು ತರುವುದು ಸೂಕ್ತವಾದುದಲ್ಲ. ತಮ್ಮ ಉದ್ದೇಶವನ್ನು ಜಾಗ್ರತೆಯಾಗಿ ಈಡೇರಿಸುವುದಕ್ಕೋಸ್ಕರ ಪಂಚಾಯತಿ ಚುನಾವಣೆಗಳನ್ನು ಆದಷ್ಟು ಬೇಗ ನಡೆಸುವುದು ಕ್ಷೇಮವೆಂದು ನಾನಂ ಸಲಹೆ ಮಾಡುತ್ತೇನೆ. ಆದರೆ ಈ ಮಸೂದೆಯನ್ನು ನಾನು ವಿತೋಧಿಸ ಬೇಕಾಗಿದೆ.

6-00 P. M.

† ಶ್ರೀ ಎಚ್. ಟಿ. ಕೃಷ್ಣಪ್ಪ.— ಮಾನ್ಯ ಅಧ್ಯಕ್ಷರೇ, ಎರಡು ಕಾರಣಗಳಿಗಾಗಿ ಈ ತಿದ್ದುಪಡಿ ವಿಧೇಯಕವನ್ನು ನಾನು ಆಕ್ಷೇಪಣೆ ಮಾಡಬೇಕಾಗಿದೆ. ಮೊದಲನೆಯದಾಗಿ, ಮಾನ್ಯ ಮಂತ್ರಿಗಳು ಕೊಟ್ಟಂಥ ಭರವಸೆಯನ್ನು, ಸರ್ಕಾರದವರು ಕೊಟ್ಟಂಥ ಭರವಸೆಗೆ ಗೌರವ ಸಿಗಬೇಕು ಎಂದರೆ ಚುನಾವಣೆಗಳನ್ನು ನಡೆಯಬೇಕಾಗಿತ್ತು. ಇವತ್ತು ಅವರು ಕೊಟ್ಟಿರತಕ್ಕಂಥ ಭರವಸೆಗಳನ್ನು ಈಡೇರಿಸಿತಕ್ಕಂಥ ಮನೋಧರ್ಮವುಳ್ಳವರಾಗಿರುತ್ತಾರೆ, ಸರ್ವ ಶಕ್ತರಾಗಿರುತ್ತಾರೆ ಅಂಥವರು ಇವತ್ತಿನ ದಿವಸ ಕೊಟ್ಟಂಥ ಭರವಸೆಯನ್ನು ಈಡೇರಿಸುವುದನ್ನು ಮಾನ್ಯ ಶ್ರೀ ರಾಜಯ್ಯನವರು ಮರೆತಿದ್ದಾರೆ. ಈ ಕಾರಣಕ್ಕಾಗಿ ನಾನು ಖಂಡನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇನ್ನು ಎರಡನೆಯದು ಚುನಾವಣೆಗಳನ್ನು ಮುಂದೂಡಿಸುತ್ತಿರುವುದಕ್ಕೆ ಕೊಟ್ಟಿರತಕ್ಕಂಥ ಕಾರಣ ಬಹಳ ಕ್ಷುಲ್ಲಕವಾದುದು; ಎನ್ನುವ ಬಗ್ಗೆ ನಮ್ಮ ಸ್ನೇಹಿತರುಗಳು ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಚುನಾವಣೆಗಳನ್ನು ನಡೆಯಿಸದೇ ಹೋದರೆ ಏನಾಗುತ್ತದೆಂದರೆ ಈಗಿರತಕ್ಕಂಥ ಪದಾಧಿಕಾರಿಗಳು ಏನಿದ್ದಾರೆ, ಅವರಿಗೆ ಇನ್ನಿತ್ತಿನ ದಿವಸ ಕೆಲಸ ಕಾರ್ಯಗಳನ್ನು ಮಾಡಲಂ ಆಸಕ್ತಿ ಇಲ್ಲ, ಉತ್ಸಾಹವಿಲ್ಲ ಕಳಕಳಿ ಇಲ್ಲ, ಮುಂದೆ ನಾವು ಆಯ್ಕೆಯಾಗಿ ಬರುತ್ತೇವೆ ಎನ್ನುವ ವಿಶ್ವಾಸ ಕೂಡ ಅವರಲ್ಲಿ ಇಲ್ಲ ಆದುದರಿಂದ ಎಷ್ಟೋ ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಸರಿಯಾಗಿ ತೆರಿಗೆಗಳನ್ನು ವಸೂಲು ಮಾಡುತ್ತಿಲ್ಲ. ಪಂಚಾಯಿತಿಯವರು ತೆರಿಗೆ ಹಣವನ್ನು ವಸೂಲು ಮಾಡಿದರೂ ಕೂಡ ಅದನ್ನು ಸರಿಯಾಗಿ ಸದ್ವಿನಿಯೋಗ ಮಾಡುತ್ತಿಲ್ಲ. ಅದೂ ವಸೂಲು ಮಾಡಿದಂಥ ತೆರಿಗೆ ಹಣದಿಂದ ಇವತ್ತಿನ ದಿವಸ ದೊಡ್ಡ ದೊಡ್ಡವರನ್ನು ಕರೆಸಿ ಸಮಾರಂಭಗಳನ್ನು ಏರ್ಪಾಡು ಮಾಡುವುದರಲ್ಲಿಯೇ ಹಣ ವಿನಿಯೋಗ ಮಾಡತಕ್ಕಂಥ ಒಂದು ಪರಿಸ್ಥಿತಿ ನಡೆದುಕೊಂಡು ಬರುತ್ತಿದೆ. ಅಲ್ಲಿ ಈಗ ಆಗುತ್ತಿರತಕ್ಕಂಥ ಕೆಲಸಗಳು ಇಷ್ಟೇ ಹೊರತು ಜನೋಪಯೋಗಕ್ಕೆ ಕೆಲಸಗಳು ನಡೆಯುತ್ತಿಲ್ಲ. ಏಕೆಕ್ಕೆಂದರೆ ಇವತ್ತು ಪಂಚಾಯಿತಿಗೆ ವಿಶಿಷ್ಟ ಸ್ಥಾನ ನಮ್ಮಲ್ಲಿ ಇದೆ. ವಿಶಿಷ್ಟ ಜವಾಬ್ದಾರಿ ಇದೆ, ಆ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆಯಲ್ಲಿ ತರದೇ ಹೋದರೆ ಜನಗಳಿಗೆ ಆದರಿಂದ ತೊಂದರೆಯಾಗುತ್ತದೆ ಈ ತೊಂದರೆಯನ್ನು ತಪ್ಪಿಸುವುದಕೋಸ್ಕರ ಕೂಡಲೇ ಚುನಾವಣೆಗಳನ್ನು ಮಾಡಬೇಕು. ಏಕೆಕ್ಕೆಂದರೆ ಮಳೆಯಾದ ಒಂದು ಹಳೆಯ ನೀರನ್ನು ಕೊಟ್ಟುಕೊಡು ಹೋಗಿ ಹೊಸ ನೀರು ಹೇಗೆ ನಿಲ್ಲುತ್ತದೆಯೋ ಹಾಗೆ, ಮತ್ತೆ ಹೊಸ ನೀರು ಬಂದಾಗ ಹೇಗೆ ತಿಳಿಯಾಗಿರುವುದಕ್ಕೆ ಸಾಧ್ಯವೋ ಹಾಗೆ, ಕೊಳೆತ ನೀರು ಹೋಗಿ ಹೊಸ ನೀರು ಬಂದರೆ, ಆಗ ನಾವು ನಿರ್ಮಲವಾದ ವಾತಾವರಣವನ್ನು ಗಾಣುವುದಕ್ಕೆ ಸಾಧ್ಯ ಚುನಾವಣೆ ಏತಕ್ಕೆ ಆಗಬೇಕೆಂದರೆ ಅದು ನಮ್ಮ ಜನಗಳಿಗೆ ತೀರಾ ಅವಶ್ಯಕ, ನಮ್ಮ ಜನಗಳ ಕಷ್ಟ ಕಾರ್ಪಣ್ಯಗಳನ್ನು ನಿವಾರಣೆ ಮಾಡಬೇಕಾದರೆ ಪಂಚಾಯಿತಿಗಳ ಚುನಾವಣೆಗಳು ಆಗಬೇಕಾದಂಥ ಕೆಲಸ ಆಗತ್ಯ ಆದುದರಿಂದ ಈಗಲೂ ಸಹ ತಾವು ಹೆಚ್ಚು ಕಾಲ ಮುಂದೂಡಿಸದೆ ತಕ್ಷಣ ಪಂಚಾಯಿತಿಗಳ ಚುನಾವಣೆಗಳನ್ನು ಮಾಡಬೇಕು, ತುರ್ತು ಪರಿಸ್ಥಿತಿಯ ಕಾರಣ ಕೊಡುತ್ತಿದ್ದೀರಿ, ಇದು ನಿಜವಾಗಿಯೂ ಸಹ ಒಂದು ನಂಬುವುದಕ್ಕೆ ಆರ್ಹವಾದ ಕಾರಣವಲ್ಲವೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ಪಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ತಂದಿರತಕ್ಕಂಥ ವಸೂದೆ ಏನಿದೆ ಅದನ್ನು ೧೫ ಕ್ಕೆ ೧೦ ಪರ್ಸೆಂಟ್‌ಗಿಂತ ಹೆಚ್ಚಾಗಿ ಅತನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಹಿರಿಯ ಸದಸ್ಯರಾದ ಶ್ರೀ ಕಕ್ಕಿಲಾಯರವರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆಪೂರಕವಾಗಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ನಮ್ಮ ಸ್ನೇಹಿತರಾದ ಶ್ರೀ ಬೈರೇಗೌಡರವರು ಹೇಳಿದಂಥ ಮಾತು ಸಹ ಸರಿಯಾಗಿದೆ. ಮಾನ್ಯ ಅಧ್ಯಕ್ಷರೇ ಇವತ್ತು ಚುನಾವಣೆಗಳನ್ನು ನ್ಯಾಶನಲ್ ಎಮೆರ್ಜೆನ್ಸಿ ಇದೆ ಎನ್ನುವ ಕಾರಣಕ್ಕೋಸ್ಕರ ಪಂಚಾಯಿತಿಗಳ ಚುನಾವಣೆಗಳನ್ನು ಮುಂದಕ್ಕೆ ಹಾಕತಕ್ಕಂಥದ್ದು ಯಾವುದೇ ರೀತಿಯಲ್ಲಿ ಯೋಗ್ಯವಾದುದಲ್ಲ ಇದನ್ನು ನೋಡಿದಾಗ ಪ್ರತಿಯೊಂದಕ್ಕೂ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಮುಖವಾಡವನ್ನು ಹಾಕಿಕೊಂಡು ಜನಗಳ ಹತ್ತಿರ ಹೋಗುವುದಕ್ಕೆ ಹೆದರುತ್ತಿದ್ದಾರೆ ಎಂದು ಸ್ಪಷ್ಟವಾಗುತ್ತದೆ ಆ ರೀತಿ ತಾವು ಹೆದರದೇ ಹೋಗಿದ್ದರೆ ಚುನಾವಣೆಗಳನ್ನು ಮಾಡುತ್ತಿದ್ದಿರಿ, ಮಾನ್ಯ ಕಕ್ಕಿಲಾಯರವರು ಹೇಳಿದಹಾಗೆ ಕೆಲವು ಕಡೆ ಚುನಾವಣೆಗಳನ್ನು ಮಾಡಿದ್ದೀರಿ ಆದರಲ್ಲಿ ನಿಮ್ಮ ಪಕ್ಷದವರೇ ಆರಿಸಿ ಬಂದಿದ್ದಾರೆ ಆದರ ಬಗ್ಗೆ ನಮಗೆ ಚಿಂತೆ ಇಲ್ಲ. ಹಳ್ಳಿಯಿಂದ ಡೆಲ್ಲಿಯವರೆಗೂ ನೀವೇ ಆರಿಸಿ ಬನ್ನಿ, ನೀವು ಆರಿಸಿ ಬನ್ನಿ ಹಳ್ಳಿಹಳ್ಳಿಗಳಿಗೆ ಬಂದು ಜನಗಳ ಹತ್ತಿರ ಹೋಗಿ ಚುನಾವಣಾ

ಕಣಕ್ಕೆ ಇಳಿಯಿರಿ, ಜನಗಳ ಹತ್ತಿರ ಮತಗಳನ್ನು ಯೋಚಿಸಿ ಮತ್ತೆ ಅಧಿಕಾರದಲ್ಲಿ ರಾರಾಜಿಸಿ. ನಾವು ಜನತಂತ್ರವಾದಿಗಳು, ನೀವು ಜನತಂತ್ರವಾದಿಗಳು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದಿದ್ದರೆ ನೀವು ಜನಗಳಿಗೆ ಹೆದರದೇ ಇದ್ದಿದ್ದರೆ ಗ್ರಾಮ ಪಂಚಾಯಿತಿಗಳ ಚುನಾವಣೆಗಳನ್ನು ನಡೆಸುತ್ತಿದ್ದೀರಿ ಆದರೆ ನಿಮಗೆ ಜನಗಳಲ್ಲಿ ಭಯವಿದೆ, ಹೆದರಿಕೆ ಇದೆ ಆದುದರಿಂದಲೇ ಚುನಾವಣೆಗಳನ್ನು ನಡೆಸದೇ ಮುಂದಕ್ಕೆ ಹಾಕುತ್ತಿದ್ದೀರಿ. ನಿಮಗೆ ಚುನಾವಣೆಗಳನ್ನು ನಡೆಸಲು, ಜನಗಳ ಮುಂದೆ ಹೋಗಲು ಧೈರ್ಯವಿಲ್ಲದೇ ಇರುವುದನ್ನು ನೋಡಿದಾಗ, ನಿಮಗೆ ಜನಗಳನ್ನು ಕಂಡರೆ ಸಿಂಹಸ್ವಪ್ನವಾಗುತ್ತಿದೆಂದು ನನಗನ್ನಿಸುತ್ತದೆ. ಯಾವುದೋ ಕ್ಷುಲ್ಲಕ ಕಾರಣಗಳಿಂದ ವರ್ಷೇವರ್ಷೇ ಚುನಾವಣೆಗಳನ್ನು ಮುಂದಾವರಿಸುತ್ತಿದ್ದೀರಿ; ಈಗ ನಮ್ಮ ಸ್ನೇಹಿತರು ಆದ ಶ್ರೀ ಬೈರೇಗೌಡರವರು ಹೇಳಿದರು ಯಾವುದೋ ಗ್ರಾಮ ಪಂಚಾಯಿತಿಯಲ್ಲಿ ಅಕ್ರಮ ನಡೆದಿದೆ ಎಂದು ಆದರೆ ನಾವು ಸಹ ಬೇಕಾದರೆ ಎಲ್ಲೆಲ್ಲಿ ಪಂಚಾಯಿತಿಗಳಲ್ಲಿ ಅಕ್ರಮ ನಡೆದಿದೆಯೆನ್ನುವ ಬಗ್ಗೆ ಒಂದು ಲೀಸ್ಟ್‌ನ್ನು ಕೊಡುತ್ತೇವೆ. ಇಂಥ ಪಂಚಾಯಿತಿಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ಈಗಿನ ಕಾನೂನಿನ ಪ್ರಕಾರ ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ, ಸರ್ಕಾರಕ್ಕೆ ಅಧಿಕಾರವಿದೆ ಅದನ್ನು ಬೇಕಾದರೆ ತಾವು ಮಾಡಿ. ಚುನಾವಣಾ ಕಣಕ್ಕೆ ಇಳಿದು ಜನಗಳ ಹತ್ತಿರ ಬನ್ನಿ ಜನಗಳ ಎದುರಿಗೆ ಬನ್ನಿ, ಜನಗಳ ಹತ್ತಿರ ಮತಗಳನ್ನು ಬೇಡಿ ತಾವು ಮತ್ತೆ ಅಧಿಕಾರಕ್ಕೆ ಬನ್ನಿ ಆದರೆ ತಾವು ಹಾಗೆ ಮಾಡದೆ ಚುನಾವಣೆಗಳನ್ನು ಮುಂದುವರಿಸುತ್ತಾ ಹೋಗುವುದು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರುವಂಥ ಜನ ಯಾರೂ ಮಾಡತಕ್ಕಂಥ ಕೆಲಸವಿದು ಅಲ್ಲ. ತಮಗೆ ಪ್ರಜಾಪ್ರಭುತ್ವದಲ್ಲಿ ಕಳಕಳಿ ಇದ್ದರೆ, ಸ್ವಾತಂತ್ರ್ಯದ ಬಗ್ಗೆ, ಜನಗಳಲ್ಲಿ ನಂಬಿಕೆ ಇದ್ದರೆ ಇವತ್ತು ತಾವು ಚುನಾವಣೆಗಳನ್ನು ಮುಂದುವರಿಸುವುದಕ್ಕೆ ಹೋಗದೆ ಚುನಾವಣೆಗಳನ್ನು ನಡೆಸಿ. ಹಳ್ಳಿ ಹಳ್ಳಿಗಳಲ್ಲಿ, ಜಿಲ್ಲೆಯಲ್ಲೂ ಸಹ ತಾವೇ ಪುನಃ ಆರಿಸಿ ಬಂದು ಅಧಿಕಾರ ಸ್ಥಾನದಲ್ಲಿ ಕೂತುಕೊಳ್ಳಿ ಆದರೆ ಈ ರೀತಿ ಚುನಾವಣೆಗಳನ್ನೂ ಮಾತ್ರ ಮುಂದಕ್ಕೆ ಹಾಕಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಎನ್. ರಾಚಯ್ಯ— ಮಾನ್ಯ ಅಧಕ್ಷರೇ ಈ ಒಂದು ಪುಟ್ಟ ತಿದ್ದುಪಡಿ ಮಸೂದೆಯ ಮೇಲೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಗ್ರಾಮ ಪಂಚಾಯಿತಿಗಳು ಹಳ್ಳಿಗಳಲ್ಲಿ ಯಾವ ರೀತಿಯಾಗಿ ಕೆಲಸ ಮಾಡುತ್ತಿವೆ, ಮತ್ತು ಅಲ್ಲಿರತಕ್ಕಂಥ ಜನಗಳು ಸರಿಯಾಗಿ ಕೆಲಸ ಮಾಡುತಿಲ್ಲ ಎನ್ನುವ ಬಗ್ಗೆ ವಿರೋಧ ಪಕ್ಷದ ಸದಸ್ಯರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರೂ ಸಹ ಎಲ್ಲರೂ ಕೂಡ ಒಮ್ಮತದಿಂದ ಅಭಿಪ್ರಾಯ ಪಟ್ಟಿದ್ದಾರೆ. ಆದು ಸರ್ಕಾರದ ಅಭಿಪ್ರಾಯವೂ ಕೂಡ ಆಗಿದೆ. ಮತ್ತೆ ಕೆಲವು ಅನುಮಾನಗಳನ್ನು ಸಹ ವ್ಯಕ್ತಪಡಿಸಿದ್ದಾರೆ. ಖಂಡಿತವಾಗಿಯೂ ನಮ್ಮ ದೇಶದಲ್ಲಿ ಈ ತರಹದ ತುರ್ತು ಪರಿಸ್ಥಿತಿ ಬರುತ್ತದೆಂದು ನೀರಿಕ್ಷೆ ಮಾಡಿರಲಿಲ್ಲ, ಆದರೂ ನನಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ. ಹಾಗೂ ವಿಶ್ವಾಸವನ್ನಿಟ್ಟುಕೊಂಡಿರುತ್ತೇನೆ. ಮಾನ್ಯ ಶ್ರೀ ಎಚ್. ಟಿ. ಕೃಷ್ಣಪ್ಪನವರು ಹೇಳಿದ ಹಾಗೆ ಹೊಸ ನೀರು ಬಂದಾಗ ಹಳೆಯ ನೀರು ಕೊಚ್ಚಿ ಕೊಂಡು ಹೋಗುತ್ತದೆ, ಆಗ ನಿರ್ಮಲವಾದ ವಾತಾವರಣವಿರುತ್ತದೆ ಎನ್ನವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ನೂರಕ್ಕೆ 80 ಭಾಗ ಜನ ಅವಿದ್ಯಾವಂತರೇ ಇರುವಂಥ ಕಾಲದಲ್ಲಿ, ನಾವು ಜನಗಳಲ್ಲಿ ಪ್ರಜ್ಞೆಯನ್ನು ಉಂಟು ಮಾಡಬೇಕಾಗಿದೆ ಶಿಸ್ತನ್ನು ಉಂಟು ಮಾಡಬೇಕಾಗಿದೆ,

ಶ್ರೀ ಕೋಣಂದೂರು ಲಿಂಗಪ್ಪ— ಚುನಾವಣೆಗಳನ್ನು ಮುಂದಕ್ಕೆ ಹಾಕುವುದರಿಂದ ಜನಗಳಲ್ಲಿ ಪ್ರಜ್ಞೆ ಹೇಗೆ ಉಂಟಾಗುತ್ತದೆ?

ಶ್ರೀ ಎನ್. ರಾಚಯ್ಯ— ನಾನು ಕೂಡ ಈ ಪಕ್ಷದಲ್ಲಿ ಹಿಂದೆ ಇದ್ದವನು, ಡಾ. ಲೊಹಿಯಾರವರು ಏನು ಹೇಳಿದ್ದಾರೆ ಎಂದರೆ ಜನಗಳಲ್ಲೂ ಸಹ ಜಾಗೃತಿ ಉಂಟಾಗಬೇಕು, ಪಟ್ಟಭದ್ರ ಹಿತಾಶಕ್ತಿಗಳನ್ನು ತೆಗೆದುಹಾಕಬೇಕೆಂದು ಹೇದ್ದಾರೆ ನಿಜ. ನಾವು ಪ್ರಜಾಪ್ರಭುತ್ವದ ರೀತಿಯಲ್ಲಿಯೇ ಮಾಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ— ಚುನಾವಣೆಗಳನ್ನು ಮಾಡುವುದು ಬೇಡವೆಂದು ಅವರು ಹೇಳಲೇ ಇಲ್ಲ.

ಶ್ರೀ ಎನ್. ರಾಚಯ್ಯ—ಚುನಾವಣಿಗಳನ್ನು ನಡಿಸುವ ವಿಚಾರ ಒಂದೇ ಅಲ್ಲ, ನಾನು ಕಳೆದ ಸಾರಿಯೇ ಈ ಚುನಾವಣೆಗಳನ್ನು ನಡೆಸುವ ವಿಚಾರದಲ್ಲಿ ಹೇಳಿದ್ದೆ. ಯಾರು ಕಾರ್ಮಿಕರಿದ್ದಾರೆ, ಬಡ ಕೂಲಿಗಾರರಿದ್ದಾರೆ, ಯಾರು ಶೋಷಣೆಗೆ ಒಳಗಾಗಿದ್ದಾರೆ ಅಂಥವರೇ ಇವತ್ತಿನ ದಿವಸ

ಗ್ರಾಮಾಂತರ ಪ್ರದೇಶಗಳಲ್ಲಿ ಬಹು ಸಂಖ್ಯೆಯಲ್ಲಿರುವುದರಿಂದ ಅವರು ಸಹ ಮುಂದಕ್ಕೆ ಬರಬೇಕಾದರೆ 4 ವರ್ಷಗಳಿಗೊಂದು ಸಾರಿಯಲ್ಲ 2 ವರ್ಷಗಳಿಗೊಂದು ಸಾರಿ ಚುನಾವಣೆಗಳು ನಡೆಯಬೇಕೆಂದು ಹೇಳತಕ್ಕಂಥ ಮನೋಭಾವವುಳ್ಳಂಥವನು ನಾನು. ಆದುದರಿಂದ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಅಪ್ಪಿಣಕ್ಕಿವ್ ಲೀಡರ್ ಶಿಪ್ ಬೇಕೆನಬೇಕೆನ್ನತಕ್ಕಂಥದ್ದು ಸರ್ಕಾರದವರ ಉದ್ದೇಶವಿದೆ.

ಅವಕ್ಕೊಸ್ಕರ ಪಕ್ಷ, ಪಂಗಡ, ಅಥವಾ ಒಂದು ರಾಜಕೀಯ ಇರಬಾರದು ಎಂದು ಹೇಳುತ್ತೇನೆ ಈಗ ಮಾನ್ಯ ಸದಸ್ಯರು ಗುಜರಾತಿನ ವಿಷಯ ಹೇಳಿದರು, ಕೇರಳಾದಲ್ಲಿ ಮುಖ್ಯಮಂತ್ರಿಗಳು ಕಮ್ಯುನಿಸ್ಟ್ ಪಕ್ಷದವರಾಗಿದ್ದರು, ಅವರು ಅದನ್ನು ಹೇಳಲಿಲ್ಲ. ಇವೊತ್ತಿನ ದಿವಸ ನಾವು ಗುಜರಾತ್ ನೋಡುವುದನ್ನು ಬೇಡ, ಕೇರಳ ರಾಜ್ಯ ನೋಡುವುದು ಬೇಡ, ನಮ್ಮ ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಶಿಸ್ತಿನಿಂದ ಒಳ್ಳೆಯ ಮನೋಭಾವದಿಂದ ಜನರು ಇದ್ದಾರೆ ಬಹಳ ಧೈರ್ಯವಾದ ವಿಶ್ವಾಸದಿಂದ ತಮ್ಮ ಹಕ್ಕನ್ನು ಚಲಾಯಿಸುವುದು ಇದೆ, ಮೊನ್ನೆತಾನೆ ನಮ್ಮ ಪ್ರಧಾನ ಮಂತ್ರಿಯವರು ಮಾತನಾಡುತ್ತಾ ಆ ಪಕ್ಷ, ಈ ಪಕ್ಷ ಏನ್ನುವುದು ಬೇಡ ಯಾವ ಪಕ್ಷಕ್ಕೆ ಸೇರಿರಲಿ ಅವರಿಗೆ ನಮ್ಮ 20 ಅಂಶಗಳ ಕಾರ್ಯಕ್ರಮದ ಅರಿವನ್ನು ಮಾಡಬೇಕಾದುದು ನಮ್ಮ ಕರ್ತವ್ಯ ಎಂದು ಹೇಳಿದರು. ಇವೊತ್ತಿನ ದಿವಸ ತುರ್ತು ಪರಿಸ್ಥಿತಿಯನ್ನು ಏತಕ್ಕೆ ತಮ್ಮ ಮುಂದೆ ಇಟ್ಟಿದ್ದಾರೆ ಎಂದರೆ ಒಂದು ಕಾರಣ ಪೀಪಲ್ಸ್ ಈಸ್ ದಿ ಪ್ರೈಸ್ ಆಫ್ ದಿ ಡೆಮಾಕ್ರಸಿ ಎಂದು, ಅವರಲ್ಲಿ ಜಾಗರೂಕತೆಯನ್ನು ಉಂಟುಮಾಡಿ ಸರ್ಕಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ಆಗತ್ಯವಾಗಿ ಮಾಡಕಕ್ಕಂತಾನ್ನನ್ನು ಮಾಡುತ್ತಿದ್ದಾರೆ. ಅದು ತಮ್ಮಗೆರ್ಲಾ ಗೊತ್ತಿದೆ. ಈಗಲೂ ಕೆಲವರು ವಿರೋಧ ಪಕ್ಷದ ಮಾನ್ಯ ಸದಸ್ಯರು ಈ 20 ಅಂಶಗಳ ಕಾರ್ಯಕ್ರಮದ ಬಗ್ಗೆ ಸಹಕಾರ ನೀಡುತ್ತಿದ್ದಾರೆ. ಹೀಗೆ ಇರುವಾಗ ಮಾನ್ಯ ಸದಸ್ಯರು ಚುನಾವಣೆ ಎಮರ್ಜೆನ್ಸಿಯ ಪ್ರಶ್ನೆ ಎಲ್ಲಿದೆ ಎಂದು ಕೇಳುತ್ತೇನೆ. ಈಗ ಗ್ರಾಮ ಪಂಚಾಯತಿ ಚುನಾವಣೆಗಳಿಗೆ ನಾವು ಯಾರನ್ನು ಕಾಗ್ರೆಸ್ ಪಕ್ಷದಿಂದ ನಿಲ್ಲಿಸುವುದಕ್ಕೆ ಹೋಗುವುದಿಲ್ಲ, ಹಾಗೆಯೇ ವಿರೋಧ ಪಕ್ಷದವರು ಅವರ ಪಕ್ಷದಿಂದ ಯಾರ ನಿಲ್ಲಿಸುವುದಕ್ಕೆ ಹೋಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇನ್ನು ಈ ಪಂಚಾಯಿತಿಗಳ ಚುನಾವಣೆ ವಿಷಯದ ಬಗ್ಗೆ ಇನ್ನು ಎರಡು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆಈಗ ಗೋವಾ ರಾಜ್ಯದಲ್ಲಿ ಒಳ್ಳೆಯ ವಿದ್ಯಾವಂತರು, ಒಳ್ಳೆಯ ಜಾಗರೂಕತೆಯಿಂದ ಇರತಕ್ಕವರು ಅಲಿಯ ಪಂಚಾಯಿತಿ ಚೇರ್‌ಮೆನ್ ಒಳೆಯ ಕೆಲಸ ಕಾರ್ಯ ನಡೆಸುತ್ತಿರುವುದನ್ನು ನಾವು ನೋಡಿಕೊಂಡು ಬಂದಿದ್ದೇವೆ. ಈಗ ಮಾನ್ಯ ಸದಸ್ಯರು ಏನು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ ಆದರ ಬಗ್ಗೆ ಯೋಚಿಸಬೇಕಾಗಿಲ್ಲ. ಒಳ್ಳೆಯ ಪ್ರಾಮಾಣಿಕವಾದ ರೀತಿಯಲ್ಲಿ ಪಂಚಾಯಿತಗಳ ಚುನಾವಣೆಯನ್ನು ಎಷ್ಟು ಜಾಗ್ರತೆ ಮಾಡಬೇಕೂ ಅಷ್ಟು ಜಾಗ್ರತೆ ಮಾಡುವ ಭರವಸೆ ಕೊಡುತ್ತೇನೆ. ಮಾನ್ಯ ಕೃಷ್ಣಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾರೆ, ಈಗ ನಾನು ಒಬ್ಬ ಮಂತ್ರಿಯಾಗಿ ಭರವಸೆ ಕೊಟ್ಟರೂ ಸಹ, ತುರ್ತು ಪರಿಸ್ಥಿತಿ ಮತ್ತೆ ಜಂಟಿ ಜವಾಬ್ದಾರಿ ಇರತಕ್ಕ ಸಂದರ್ಭದಲ್ಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ತಾವು ಕೂಡ ಒಪ್ಪುತ್ತೀರಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ — ಬೇರೆ ಕಡೆ ಬೇರೆ ನಿವೇಶಗಳಲ್ಲಿ ನಡೆಯುತ್ತಿರುವಾಗ ಇಲ್ಲಿ ಏತಕ್ಕೆ ಮಾಡಬಾರದು ಎಂದು ಕೇಳತ್ತೀನೆ.

ಶ್ರೀ ಎನ್. ರಾಚಯ್ಯ — ಇವೊತ್ತಿನ ದಿವಸ ಬಡವರ ಸಂಖ್ಯೆ ಎಷ್ಟು ಇದೆ, ಎಲ್ಲಾ ಕೆಲವರು ಶ್ರೀಮಂತರು ಸೇರಿಕೊಂಡು ಚುನಾವಣೆ ಮಾಡುತ್ತಾರೆ ಎಂದು ತಾವೇ ಹೇಳಿದ್ದೀರಿ. ಈಗ ತಾವು ಚುನಾವಣೆ ನಡೆಸುವ ಬಗ್ಗೆ ಎಷ್ಟು ಒತ್ತಾಯ ಪಡಿಸುತ್ತಿರೋ ಅಷ್ಟೆ ಜಾಗರೂಕತೆಯಿಂದ ಚುನಾವಣೆ ಮಾಡಬೇಕೆಂದು ಸರ್ಕಾರಕ್ಕೆ ಬಹಳ ತೀವ್ರವಾದ ಮನಸ್ಸು ಇದೆ. ತಾವು ಏನೇನು ಸಲಹೆಗಳನ್ನು ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದಿರೋ ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬಹು ಜಾಗ್ರತೆ ಚುನಾವಣೆ ಮಾಡುವ ಬರವಸೆ ಕೊಡುತ್ತೇನೆ. ಇಷ್ಟು ಹೇಳಿ ಈ ತಿದ್ದುಪಡಿ ಮಸೂದೆಗೆ ಅಂಗೀಕಾರ ಕೊಡಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

MR. DEPUTY SPEAKER — The question is

'That the Karnataka Village Panchayats (Postponement of Elections) (Amendment) Bill, 1976, as passed by the Legislative Council, be taken into consideration.''

The motion was adopted.

Clauses 2 and 3

MR. DEPUTY SPEAKER— The question is:

"That Clauses 2 and 3, do stand part of the Bill."

The motion was adopted.

Clauses 2 and 3, were added to the Bill

Clause 1 etc.,

MR. DEPUTY SPEAKER— The question is:

"That Clause 1, the long title, the Preamble and the Enacting formula do stand part of the Bill

The motion was adopted.

Clause 1, the long Title, Preamble and the Enacting formula were added to the Bill.

Motion to Pass

SRI N. RACHAIAH— (Minister for Rural Development and Social Welfare)— Sir, I beg to move:

"That the Karnataka Village Panchayats (Postponement of Elections) (Amendment) Bill" 1976 as passed by the Legislative Council, be passed".

MR. DEPUTY SPEAKER.—The question is:

"That the Karnataka Village Panchayats (Post-ponement of Elections) (Amendment) Bill, 1976, as passed by the Legislative Council, be passed."

The Motion was adopted and the Bill was Passed

Now the House stands adjourned to meet tomorrow at 1 P.M.

The House adjourned at Fifteen Minutes past Six of the clock to meet on Thursday, the 19th February, 1976 again at One of the Clock.